SS STF KARNATAK DIGITAL GROUP

# ಕಲಿಕಾ ಚೇತರಿಕಯನ್ನಾಧರಿಸಿದ
# ಮಾದರಿ ಪ್ರಶ್ನೆ ಪತ್ರಿಕೆ

## ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 2)

ತರಗತಿ: 9ನೇ ತರಗತಿ | 2022–23 | ವಿಷಯ: ಸಮಾಜ ವಿಜ್ಞಾನ

ಅಂಕಗಳು: 80 | ಸಮಯ: 3 ಗಂಟೆ

ಮಹಾದೇವಪ್ಪ ಕುಂದರಗಿ
ಸರ್ಕಾರಿ ಪ್ರೌಢ ಶಾಲೆ ಆವತಿ
ಚಿಕ್ಕಮಗಳೂರು ತಾ&ಜಿ
ಮೊ: 9481216233

# ಎರಡನೇ ಸಂಕಲನಾತ್ಮಕ ಮೌಲ್ಯಮಾಪನ (SA 2)

ತರಗತಿ: 9ನೇ ತರಗತಿ **2022–23** ವಿಷಯ: ಸಮಾಜ ವಿಜ್ಞಾನ

ಅಂಕಗಳು: 80 ಸಮಯ: 3 ಗಂಟೆ

---

**I. ಈ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 8x1=8**

**1.** ಭೂ ಉತ್ಖನನದಲ್ಲಿ ದೊರೆತ ಅವಶೇಷಗಳು, ಶಾಸನಗಳು, ನಾಣ್ಯಗಳು ಹಾಗೂ ಸ್ಮಾರಕಗಳು

**A)** ಲಿಖಿತ ಆಧಾರಗಳು **B)** ಮೌಖಿಕ ಆಧಾರಗಳು **C)** ಪುರಾತತ್ವ ಆಧಾರಗಳು **D)** ಐತಿಹ್ಯಗಳು

**2.** ಉಂಬಳಿ ಎಂದರೆ

**A)** ಪೂರ್ವ ರೋಮನ್ ಸಾಮ್ರಾಜ್ಯ **B)** ಹಿಡುವಳಿದಾರ ಹೊಂದಿದ್ದ ಭೂಮಿ

**C)** ರೋಮ್ ನ ಬಡವರು **D)** ಇತಿಹಾಸದಲ್ಲಿ ಸಾಂಸ್ಕೃತಿಕ ಬರಡುತನ

**3.** ಗ್ಯಾರಿಬಾಲ್ಡಿಯು ಕಟ್ಟಿದ ಗುಪ್ತ ಸಮಾಜ

**A)** ತರುಣ ಇಟಲಿ **B)** ತರುಣ ಭಾರತ **C)** ತರುಣ ಜರ್ಮನಿ **D)**ತರುಣ ಯುರೋಪ್

**4.** ಭಾರತವು ಈ ಕೆಳಗಿನ ಮಾದರಿಯ ಸರ್ಕಾರ ಪದ್ಧತಿಯನ್ನು ಹೊಂದಿದೆ

**A)** ಅಧ್ಯಕ್ಷೀಯ ಮಾದರಿ **B)** ಸಂಸದೀಯ ಮಾದರಿ **C)** ರಾಜತ್ವ ಮಾದರಿ **D)** ಸರ್ವಾಧಿಕಾರಿ ಮಾದರಿ

**5.** ಸಮಾಜದ ಅತ್ಯಂತ ಚಿಕ್ಕ ಘಟಕ

**A)** ಕುಟುಂಬ **B)** ಶಾಲೆ **C)** ಸಮುದಾಯ **D)** ನೆರೆಹೊರೆ

**6.** ಕಾಫಿನಾಡು ಎಂದು ಪ್ರಸಿದ್ಧಿ ಪಡೆದಿರುವ ಕರ್ನಾಟಕದ ಜಿಲ್ಲೆ

**A)** ಬೆಳಗಾವಿ **B)** ಕೊಡಗು **C)** ದಕ್ಷಿಣ ಕನ್ನಡ **D)** ಚಿಕ್ಕಮಗಳೂರು

**7.** ಕಪ್ಪು ಮಣ್ಣಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ

**A)** ರಾಜ್ಯದ ಉತ್ತರ ಭಾಗದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ. **B)** ರಾಜ್ಯದ ದಕ್ಷಿಣ ಭಾಗದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ.

**C)** ರಾಜ್ಯದ ಮಧ್ಯ ಭಾಗದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ. **D)** ರಾಜ್ಯದ ಕರಾವಳಿ ಭಾಗದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ.

**8.** ರಫ್ತು ಎಂದರೆ

**A)** ಒಂದು ದೇಶ ಮತ್ತೊಂದು ದೇಶದಿಂದ ವಸ್ತುಗಳನ್ನು ತರಿಸಿಕೊಂಡು ಇನ್ನೊಂದು ದೇಶಕ್ಕೆ ಮಾರುವುದು.

**B)** ಒಂದು ದೇಶ ಬೇರೆ ದೇಶಕ್ಕೆ ವಸ್ತುಗಳನ್ನು ಮಾರುವುದು.

**C)** ಒಂದು ದೇಶ ತನ್ನ ಉಪಯೋಗಕ್ಕೆ ಬೇರೆ ದೇಶದಿಂದ ವಸ್ತುಗಳನ್ನು ಕೊಂಡುಕೊಳ್ಳುವುದು.

**D)** ಸಗಟು ವ್ಯಾಪಾರಿಯಿಂದ ದೊಡ್ಡ ಪ್ರಮಾಣದಲ್ಲಿ ವಸ್ತುಗಳನ್ನು ತಂದು ಚಿಲ್ಲರೆಯಾಗಿ ಮಾರುವುದು.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 8x1=8**

**9.** ಇಂದು ನಾವು ಎಷ್ಟನೇ ಶತಮಾನದಲ್ಲಿ ಜೀವಿಸುತ್ತಿದ್ದೇವೆ?

**10.** ಪುನರುಜ್ಜೀವನ ಮೊದಲು ಯಾವ ದೇಶದಲ್ಲಿ ಪ್ರಾರಂಭವಾಯಿತು?

**11.** ಪ್ರಜೆಗಳು(ಪೌರರು) ಎಂದರೆ ಯಾರು?

**12.** ಸಂವಿಧಾನವನ್ನು ಗೌರವಿಸುವುದು ಎಲ್ಲರ ಪ್ರಮುಖ ಕರ್ತವ್ಯ. ಏಕೆ?

**13.** 'ನನ್ನ ಪರಿಸರದ ಹೆಜ್ಜೆ ಗುರುತು' ಇದನ್ನು ಅರ್ಥೈಸಿ.

**14.** ಮಿಶ್ರ ಬೇಸಾಯ ಎಂದರೇನು?

**15.** ಕರ್ನಾಟಕವನ್ನು 'ಚಿನ್ನದ ನಾಡು' ಎಂದು ಕರೆಯಲು ಕಾರಣವೇನು?

**16.** ತೃತೀಯ ವಲಯದ ಉದ್ಯೋಗಗಳನ್ನು ಸೇವಾ ವಲಯ ಎಂದು ಏಕೆ ಕರೆಯುತ್ತಾರೆ?

**III.** **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:** **8x2=16**

**17.** ಟರ್ಕರು ಕಾನ್ ಸ್ಟಾಂಟಿನೋಪಲ್ ನಗರವನ್ನು ಏಕೆ ವಶಪಡಿಸಿಕೊಂಡರು?

**18.** ವಸಾಹತುಶಾಹಿತ್ವದ ಬೆಳವಣಿಗೆಯ 4 ಹಂತಗಳು ಯಾವುವು?

**19.** ಅಮೇರಿಕ ಕ್ರಾಂತಿಯು ಫ್ರಾನ್ಸ್ ಕ್ರಾಂತಿಯ ಮೇಲೆ ಹೇಗೆ ಪ್ರಭಾವ ಬೀರಿತು?

**20.** ರಾಜ್ಯಸಭೆಯ ರಚನೆಯನ್ನು ವಿವರಿಸಿ. **ಅಥವಾ**

ಸುಪ್ರಿಂ ಕೋರ್ಟ್ ನ್ಯಾಯಾಧೀಶರ ಅರ್ಹತೆಗಳೇನು?

**21.** ಭಾರತದ ಪೌರತ್ವ ಪಡೆಯುವ ವಿಧಾನಗಳನ್ನು ಪಟ್ಟಿ ಮಾಡಿ.

**22.** ಅಕ್ಷಾಂಶಗಳು ರೇಖಾಂಶಗಳಿಗಿಂತ ಹೇಗೆ ಭಿನ್ನವಾಗಿವೆ?

**23.** ಪಶ್ಚಿಮ ಘಟ್ಟ ಮತ್ತು ಮೈದಾನ ಪ್ರದೇಶದಲ್ಲಿ ಬೆಳೆಯುವ ಬೆಳೆಗಳಲ್ಲಿ ವ್ಯತ್ಯಾಸವಿದೆ. ಏಕೆ? **ಅಥವಾ**

ಕರ್ನಾಟಕದ ಪಶ್ಚಿಮ ಘಟ್ಟಗಳು ಏಕೆ ಹೆಚ್ಚು ಮಳೆ ಪಡೆಯುತ್ತವೆ?

**24.** ದ್ವಿತೀಯ ವಲಯದ ಉದ್ಯೋಗಗಳಿಗೆ ಯಾವುದಾದರೂ ನಾಲ್ಕು ಉದಾಹರಣೆ ಕೊಡಿ.

**IV.** **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ:** **9x3=27**

**25.** ಊಳಿಗಮಾನ್ಯ ಪದ್ಧತಿಯು ರಾಜಕೀಯ ವ್ಯವಸ್ಥೆಯಲ್ಲಿ ಉಂಟುಮಾಡಿದ ಬದಲಾವಣೆಗಳೇನು? ವಿವರಿಸಿ.

**26.** ಯುರೋಪಿನ ದೇಶಗಳ ಭೌಗೋಳಿಕ ಅನ್ವೇಷಣೆಗಳಿಗೆ ಕಾರಣಗಳೇನು? **ಅಥವಾ**

ಕೈಗಾರಿಕಾ ಕ್ರಾಂತಿಗೆ ಕಾರಣಗಳಾವುವು?

**27.** ಭಾರತದಲ್ಲಿ ವ್ಯವಹರಿಸುವ ಆರು ಪ್ರಮುಖ ವಿದೇಶಿ ಕಂಪನಿಗಳನ್ನು ಹೆಸರಿಸಿ.

**28.** ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡಿರುವ ಮೂಲಭೂತ ಹಕ್ಕುಗಳಾವುವು? **ಅಥವಾ**

ಲೋಕಸಭಾ ಸದಸ್ಯರ ಅರ್ಹತೆಗಳನ್ನು ವಿವರಿಸಿ.

**29.** ನಮ್ಮ ದೇಶದ ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆಯ ಯಾವುದಾದರೂ ಆರು ಘಟಕಗಳನ್ನು ತಿಳಿಸಿ.

**30.** ವಿಭಕ್ತ ಮತ್ತು ಅವಿಭಕ್ತ ಕುಟುಂಬಕ್ಕೂ ಇರುವ ವ್ಯತ್ಯಾಸಗಳೇನು?

**31.** ಪರಿಸರದ ಹೆಜ್ಜೆ ಗುರುತನ್ನು ಕಡಿಮೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳುವಿರಿ? **ಅಥವಾ**

ಮಣ್ಣಿನ ಸಂರಕ್ಷಣೆಗೆ ಕೈಗೊಳ್ಳಬಹುದಾದ ಕ್ರಮಗಳೇನು?

**32.** ರಾಬಿ ಮತ್ತು ಖಾರೀಫ್ ಕಾಲದಲ್ಲಿಯ ಬೆಳೆಯ ವ್ಯತ್ಯಾಸಗಳನ್ನು ವಿವರಿಸಿ. **ಅಥವಾ**

ಖನಿಜಗಳು ದೇಶದ ಅಭಿವೃದ್ಧಿಗೆ ಹೇಗೆ ಪೂರಕವಾಗಿವೆ? ವಿವರಿಸಿ.

**33.** ಚಿಲ್ಲರೆ ವ್ಯಾಪಾರಿಗಳಿಂದ ಆಗುವ ಅನುಕೂಲಗಳೇನು?

**V.** **ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:** **4x4=16**

**34.** ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಯಾವುದಾದರೂ ನಾಲ್ಕು ಉಪಕರಣಗಳನ್ನು, ಅವುಗಳಿಂದಾದ ಉಪಯೋಗಗಳನ್ನು ತಿಳಿಸಿ.

**35.** ಕೈಮಗ್ಗದಲ್ಲಿ ಬಟ್ಟೆ ತಯಾರಿಕೆಯ ಅನುಕೂಲಗಳು ಮತ್ತು ಅನಾನುಕೂಲಗಳನ್ನು ವಿವರಿಸಿ. **ಅಥವಾ**

ಅಮೇರಿಕ ಕ್ರಾಂತಿಗೆ ಕಾರಣಗಳು ಮತ್ತು ಅದರ ಪರಿಣಾಮಗಳನ್ನು ವಿವರಿಸಿ.

**36.** ಭಾರತ ಸಂವಿಧಾನದ ಲಕ್ಷಣಗಳನ್ನು ವಿವರಿಸಿ.

**37.** ನದಿಗಳಿಗೆ ಏಕೆ ಡ್ಯಾಮ್ (ಅಣೆಕಟ್ಟು) ಕಟ್ಟುತ್ತಾರೆ?

**VI.** **೩೮. ಕರ್ನಾಟಕದ ನಕ್ಷೆ ಬರೆದು, ಈ ಕೆಳಗಿನವುಗಳನ್ನು ಗುರುತಿಸಿ.** **1+4=5**

**a)** ಕರಾವಳಿ ಮೈದಾನ **b)** ಕೃಷ್ಣ ನದಿ **c)** ಕಾವೇರಿ ನದಿ **d)** ತುಂಗಭದ್ರ ನದಿ

************************

# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 2)

ತರಗತಿ: 9 2022-23 ವಿಷಯ: ಸಮಾಜ ವಿಜ್ಞಾನ

## ಸಾಮರ್ಥ್ಯಾನುಸಾರ ಅಂಕ ಹಂಚಿಕೆ

| ಕ್ರ.ಸಂ | ಸಾಮರ್ಥ್ಯ | ಅಂಕಗಳು | ಶೇಕಡವಾರು |
|---|---|---|---|
| 01 | ಜ್ಞಾನ | 13 | 16 |
| 02 | ತಿಳುವಳಿಕೆ | 40 | 50 |
| 03 | ಅನ್ವಯ | 22 | 28 |
| 04 | ಕೌಶಲ | 5 | 6 |

## ಕ್ಲಿಷ್ಟಾನುಸಾರ ಅಂಕ ಹಂಚಿಕೆ

| ಕ್ರ.ಸಂ | ಕ್ಲಿಷ್ಟತೆ | ಅಂಕಗಳು | ಶೇಕಡವಾರು |
|---|---|---|---|
| 01 | ಸುಲಭ | 24 | 30 |
| 02 | ಸಾಧಾರಣ | 40 | 50 |
| 03 | ಕಠಿಣ | 16 | 20 |

## ಪ್ರಶ್ನಾನುಸಾರ ಅಂಕ ಹಂಚಿಕೆ

| ಕ್ರ.ಸಂ | ಪ್ರಶ್ನೆಗಳ ಮಾದರಿಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ಬಹು ಆಯ್ಕೆ ಪ್ರಶ್ನೆಗಳು | 08 | 08 |
| 02 | ಒಂದು ಅಂಕದಪ್ರಶ್ನೆಗಳು | 08 | 08 |
| 03 | ಎರಡು ಅಂಕದ ಪ್ರಶ್ನೆಗಳು | 08 | 16 |
| 04 | ಮೂರು ಅಂಕದ ಪ್ರಶ್ನೆಗಳು | 09 | 27 |
| 05 | ನಾಲ್ಕು ಅಂಕದ ಪ್ರಶ್ನೆಗಳು | 04 | 16 |
| 06 | ಐದು ಅಂಕದ ಪ್ರಶ್ನೆ | 01 | 05 |
| | ಒಟ್ಟು | 38 | 80 |

## ಪ್ರಶ್ನೆಗಳ ಸ್ವರೂಪವಾರು ಅಂಕ ಹಂಚಿಕೆ

| ಕ್ರ.ಸಂ | ವಿಷಯ | ಬ. ಆ | 1 ಅಂಕ | 2 ಅಂಕ | 3 ಅಂಕ | 4 ಅಂಕ | 5 ಅಂಕ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 3 | 2 | 3 | 3 | 2 | - | 13 | 28 |
| 02 | ರಾಜ್ಯಶಾಸ್ತ್ರ | 2 | 2 | 2 | 2 | 1 | - | 9 | 18 |
| 03 | ಸಮಾಜ ಶಾಸ್ತ್ರ | - | - | - | 1 | - | - | 1 | 3 |
| 04 | ಭೂಗೋಳ | 2 | 3 | 2 | 2 | 1 | 1 | 11 | 24 |
| 05 | ಅರ್ಥಶಾಸ್ತ್ರ | - | 1 | 1 | - | - | - | 2 | 03 |
| 06 | ವ್ಯವಹಾರ ಅಧ್ಯಯನ | 1 | - | - | 1 | - | - | 2 | 4 |
| | ಒಟ್ಟು | 08 | 08 | 08 | 09 | 04 | 1 | 38 | 80 |

# ಕಲಿಕಾಂಶವಾರು ಅಂಕ ಹಂಚಿಕೆ

| ಕ್ರ. ಸಂ. | ಕಲಿಕಾಂಶ | ಅಂಕ ಹಂಚಿಕೆ | | | | | | ಒಟ್ಟು ಪ್ರಶ್ನೆಗಳು | ಒಟ್ಟು ಅಂಕಗಳು |
|---|---|---|---|---|---|---|---|---|---|
| | | ಬ.ಆ. | 1ಅಂಕ | 2ಅಂಕ | 3ಅಂಕ | 4ಅಂಕ | 5ಅಂಕ | | |
| 1 | ಇತಿಹಾಸದ ಆಧಾರಗಳು | 1 | | | | | | 1 | 1 |
| 2 | ಕಾಲಗಣನೆ | | 1 | | | | | 1 | 1 |
| 3 | ಮಧ್ಯಯುಗದ ಯುರೋಪಿನಲ್ಲಾದ ಐತಿಹಾಸಿಕ ಬದಲಾವಣೆಗಳು | | | 1 | 1 | | | 2 | 5 |
| 4 | ಯುರೋಪಿನಲ್ಲಿ ಪುನರುಜ್ಜೀವನ | 1 | 1 | | | | | 2 | 2 |
| 5 | ಭೌಗೋಳಿಕ ಅನ್ವೇಷಣೆ | | | | 1 | 1 | | 1 | 4 |
| 6 | ವಸಾಹತುಶಾಹಿ ನೀತಿಗಳು | | | 1 | | | | 1 | 2 |
| 7 | ಕೈಗಾರಿಕಾ ಕ್ರಾಂತಿ | | | | 1 | 1 | | 1 | 3 |
| 8 | ವಸಾಹತುಕರಣದಿಂದ ಇಂದಿನ ಜಾಗತೀಕರಣ | | | | 1 | | | 1 | 3 |
| 9 | ಕ್ರಾಂತಿಗಳು ಮತ್ತು ರಾಷ್ಟ್ರಗಳ ಏಕೀಕರಣ | | | 1 | | 1 | | 2 | 6 |
| 10 | ಯುರೋಪ್ ರಾಷ್ಟ್ರಗಳ ಏಕೀಕರಣ | 1 | | | | | | 1 | 1 |
| 11 | ಭಾರತದ ಸಂವಿಧಾನ | | 1 | | 1 | 1 | | 2 | 5 |
| 12 | ಕೇಂದ್ರ ಮತ್ತು ರಾಜ್ಯ ಸರ್ಕಾರ | 1 | | 1 | 1 | | | 2 | 4 |
| 13 | ಭಾರತದ ನ್ಯಾಯಾಂಗ ವ್ಯವಸ್ಥೆ | | | 1 | | | | 1 | 2 |
| 14 | ರಾಷ್ಟ್ರೀಯ ಚಿಹ್ನೆಗಳು | 1 | 1 | 1 | | | | 3 | 4 |
| 15 | ಭಾರತದ ರಕ್ಷಣಾ ಪಡೆಗಳು | | | | 1 | | | 1 | 3 |
| 16 | ಮಾನವ ದೈನಂದಿನ ಜೀವನದಲ್ಲಿ ಸಾಮಾಜಿಕ ಸಂಸ್ಥೆಗಳ ಪಾತ್ರ | | | | 1 | | | 1 | 3 |
| 17 | ಅಕ್ಷಾಂಶ ಮತ್ತು ರೇಖಾಂಶ | 1 | | 1 | | | | 2 | 3 |
| 18 | ಸ್ಥಳೀಯ ಭೌಗೋಳಿಕತೆ ಅಧ್ಯಯನ | | 1 | | 1 | | | 2 | 4 |
| 19 | ಕರ್ನಾಟಕದ ಪ್ರಾಕೃತಿಕ ವಿಭಾಗಗಳು | | | 1 | | | 1 | 1 | 3 |
| 20 | ಕರ್ನಾಟಕದ ಹವಾಮಾನ | | | 1 | | | 1 | 1 | 1 |
| 21 | ಕರ್ನಾಟಕದ ನದಿಗಳು | | | | | 1 | 1+1+1 | 1 | 7 |
| 22 | ಕರ್ನಾಟಕದಲ್ಲಿ ಲಭ್ಯವಿರುವ ಸಂಪನ್ಮೂಲಗಳು | 1 | | | 1 | | | 1 | 1 |
| 23 | ಕರ್ನಾಟಕದ ವ್ಯವಸಾಯ | | 1 | | 1 | | | 2 | 4 |
| 24 | ಕರ್ನಾಟಕದ ಖನಿಜಗಳು | | 1 | | 1 | | | 1 | 1 |
| 25 | ಅರ್ಥ ವ್ಯವಸ್ಥೆ | | 1 | 1 | | | | 2 | 3 |
| 26 | ವ್ಯಾಪಾರ ಮತ್ತು ವ್ಯವಹಾರ | 1 | | | 1 | | | 2 | 4 |
| | ಒಟ್ಟು | 8 | 8 | 8 | 9 | 4 | 1 | 38 | 80 |

**ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 2)**

**ತರಗತಿ: 9ನೇ ತರಗತಿ** **2022–23** **ವಿಷಯ: ಸಮಾಜ ವಿಜ್ಞಾನ**

**ಅಂಕಗಳು: 80** **ಮಾದರಿ ಉತ್ತರಗಳು** **ಸಮಯ: 3 ಗಂಟೆ**

---

**I. ಈ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 8x1=8**

**1.** ಭೂ ಉತ್ಖನನದಲ್ಲಿ ದೊರೆತ ಅವಶೇಷಗಳು, ಶಾಸನಗಳು, ನಾಣ್ಯಗಳು ಹಾಗೂ ಸ್ಮಾರಕಗಳು

**C)** ಪುರಾತತ್ವ ಆಧಾರಗಳು

**2.** ಉಂಬಳಿ ಎಂದರೆ

**B)** ಹಿಡುವಳಿದಾರ ಹೊಂದಿದ್ದ ಭೂಮಿ

**3.** ಗ್ಯಾರಿಬಾಲ್ಡಿಯು ಕಟ್ಟಿದ ಗುಪ್ತ ಸಮಾಜ

**A)** ತರುಣ ಇಟಲಿ

**4.** ಭಾರತವು ಈ ಕೆಳಗಿನ ಮಾದರಿಯ ಸರ್ಕಾರ ಪದ್ಧತಿಯನ್ನು ಹೊಂದಿದೆ

**B)** ಸಂಸದೀಯ ಮಾದರಿ

**5.** ಸಮಾಜದ ಅತ್ಯಂತ ಚಿಕ್ಕ ಘಟಕ

**A)** ಕುಟುಂಬ

**6.** ಕಾಫಿನಾಡು ಎಂದು ಪ್ರಸಿದ್ಧಿ ಪಡೆದಿರುವ ಕರ್ನಾಟಕದ ಜಿಲ್ಲೆ

**D)** ಚಿಕ್ಕಮಗಳೂರು

**7.** ಕಪ್ಪು ಮಣ್ಣಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ

**A)** ರಾಜ್ಯದ ಉತ್ತರ ಭಾಗದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ.

**8.** ರಫ್ತು ಎಂದರೆ

**C)** ಒಂದು ದೇಶ ತನ್ನ ಉಪಯೋಗಕ್ಕೆ ಬೇರೆ ದೇಶದಿಂದ ವಸ್ತುಗಳನ್ನು ಕೊಂಡುಕೊಳ್ಳುವುದು.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 8x1=8**

**9.** ಇಂದು ನಾವು ಎಷ್ಟನೇ ಶತಮಾನದಲ್ಲಿ ಜೀವಿಸುತ್ತಿದ್ದೇವೆ?

❖ 21ನೇ ಶತಮಾನದಲ್ಲಿ ಜೀವಿಸುತ್ತಿದ್ದೇವೆ.

**10.** ಪುನರುಜ್ಜೀವನ ಮೊದಲು ಯಾವ ದೇಶದಲ್ಲಿ ಪ್ರಾರಂಭವಾಯಿತು?

❖ ಇಟಲಿ ದೇಶದಲ್ಲಿ ಪ್ರಾರಂಭವಾಯಿತು.

**11.** ಪ್ರಜೆಗಳು(ಪೌರರು) ಎಂದರೆ ಯಾರು?

❖ ಒಂದು ದೇಶದ ಪೌರತ್ವವನ್ನು ಪಡೆದಿರುವವರು.

**12.** ಸಂವಿಧಾನವನ್ನು ಗೌರವಿಸುವುದು ಎಲ್ಲರ ಪ್ರಮುಖ ಕರ್ತವ್ಯ. ಏಕೆ?

❖ ಸಂವಿಧಾನ ಎಂಬುದು ಒಂದು ದೇಶದ ಮೂಲಭೂತ ಕಾನೂನು.

**13.** 'ನನ್ನ ಪರಿಸರದ ಹೆಜ್ಜೆ ಗುರುತು' ಇದನ್ನು ಅರ್ಥೈಸಿ.

❖ ತಮ್ಮ ಅಗತ್ಯಕ್ಕಿಂತ ಹೆಚ್ಚು ಸಂಪನ್ಮೂಲಗಳು ಬಳಸುವುದನ್ನು ಕಡಿಮೆ ಮಾಡುವ ಬಗೆಗಿನ ಪ್ರಜ್ಞಾಪೂರ್ವಕ ತಿಳುವಳಿಕೆಯೇ ನನ್ನ ಪರಿಸರ ಹೆಜ್ಜೆ ಗುರುತು.

**14.** ಮಿಶ್ರ ಬೇಸಾಯ ಎಂದರೇನು?

- ❖ ಕೃಷಿಯ ಜೊತೆಗೆ ಹೈನುಗಾರಿಕೆ, ದನಸಾಕಾಣಿಕೆ, ಮೀನುಸಾಕಾಣಿಕೆ, ಜೇನುಸಾಕಾಣಿಕೆ ಇತ್ಯಾದಿ ಮಾಡುವುದು.

**15.** ಕರ್ನಾಟಕವನ್ನು 'ಚಿನ್ನದ ನಾಡು' ಎಂದು ಕರೆಯಲು ಕಾರಣವೇನು?

- ❖ ಕರ್ನಾಟಕವು ಚಿನ್ನದ ಗಣಿಗೆ ಪ್ರಸಿದ್ಧವಾಗಿದೆ.

**16.** ತೃತಿಯ ವಲಯದ ಉದ್ಯೋಗಗಳನ್ನು ಸೇವಾ ವಲಯ ಎಂದು ಏಕೆ ಕರೆಯುತ್ತಾರೆ?

- ❖ ತೃತೀಯ ವಲಯವು ಉದ್ಯೋಗಗಳಿಗೆ ಸೇವೆಯನ್ನು ಒದಗಿಸುವುದರಿಂದ ಸೇವಾ ವಲಯ ಎಂದು ಕರೆಯುತ್ತಾರೆ.

**III.** **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:** **8x2=16**

**17.** ಟರ್ಕರು ಕಾನ್ ಸ್ಟಾಂಟಿನೋಪಲ್ ನಗರವನ್ನು ಏಕೆ ವಶಪಡಿಸಿಕೊಂಡರು?

- ❖ ಕಾನ್ ಸ್ಟಾಂಟಿನೋಪಲ್ ನಗರವು ಭೂ ವ್ಯಾಪಾರದಲ್ಲಿ ಯುರೋಪ್ ಮತ್ತು ಏಷ್ಯಾವನ್ನು ಸಂಪರ್ಕಿಸುತ್ತಿತ್ತು.
- ❖ ವ್ಯಾಪಾರದ ಮೂಲಕ ಹೆಚ್ಚಿನ ತೆರಿಗೆಯನ್ನು ಸಂಗ್ರಹಿಸಲು ಬಯಸಿದ್ದರು.

**18.** ವಸಾಹತುಶಾಹಿತ್ವದ ಬೆಳವಣಿಗೆಯ 4 ಹಂತಗಳು ಯಾವುವು?

- ❖ ಮಧ್ಯಮ ಹಂತ
- ❖ ಮುಕ್ತ ವ್ಯಾಪಾರ ಹಂತ
- ❖ ಹಣಕಾಸು ವ್ಯವಹಾರ ಅಥವಾ ತೆರಿಗೆ ಸಂಗ್ರಹ ಹಂತ
- ❖ ರಾಜಕೀಯ ಅಧಿಕಾರ ಹಂತ

**19.** ಅಮೇರಿಕ ಕ್ರಾಂತಿಯು ಫ್ರಾನ್ಸ್ ಕ್ರಾಂತಿಯ ಮೇಲೆ ಹೇಗೆ ಪ್ರಭಾವ ಬೀರಿತು?

- ❖ ಅಮೇರಿಕ ಕ್ರಾಂತಿಯಲ್ಲಿದ್ದ ಅನೇಕ ಫ್ರೆಂಚರು ಬ್ರಿಟಿಷರ ವಿರುದ್ಧ ಹೋರಾಡಿದ್ದರು.
- ❖ ಕೆಲವು ಹೋರಾಟಗಾರರು ಫ್ರಾನ್ಸ್ ಗೆ ಮರಳಿದ್ದರು.
- ❖ ಅವರು ಫ್ರಾನ್ಸ್ ಕ್ರಾಂತಿಗೆ ಬಲ ಮತ್ತು ಉತ್ಸಾಹಗಳನ್ನು ನೀಡಿದರು.

**20.** ರಾಜ್ಯಸಭೆಯ ರಚನೆಯನ್ನು ವಿವರಿಸಿ.

- ❖ ರಾಜ್ಯಸಭೆಯು 250 ಸದಸ್ಯರನ್ನು ಒಳಗೊಂಡಿದೆ.
- ❖ 238 ಸದಸ್ಯರು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಯ ಸದಸ್ಯರಿಂದ ಆಯ್ಕೆಯಾಗುತ್ತಾರೆ.
- ❖ ಉಳಿದ 12 ಸದಸ್ಯರು ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಮಾಜ ಸೇವೆಯಲ್ಲಿ ವಿಶೇಷ ಅನುಭವ ಪಡೆದವರನ್ನು ರಾಷ್ಟ್ರಪತಿಗಳು ನಾಮಕರಣ ಮಾಡುತ್ತಾರೆ.

**ಅಥವಾ**

ಸುಪ್ರಿಂ ಕೋರ್ಟ್ ನ್ಯಾಯಾಧೀಶರ ಅರ್ಹತೆಗಳೇನು?

- ❖ ಭಾರತದ ಪ್ರಜೆಯಾಗಿರಬೇಕು,
- ❖ ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಕನಿಷ್ಠ 5 ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ
- ❖ ಸಲ್ಲಿಸಿರಬೇಕು ಅಥವಾ ಯಾವುದೇ ಉಚ್ಚ ನ್ಯಾಯಾಲಯದಲ್ಲಿ 10 ವರ್ಷಗಳ ಕಾಲ ವಕೀಲರಾಗಿ
- ❖ ಸೇವೆ ಸಲ್ಲಿಸಿರಬೇಕು.
- ❖ ರಾಷ್ಟ್ರಪತಿಯವರ ಅಭಿಪ್ರಾಯದಲ್ಲಿ ನ್ಯಾಯ ನಿಪುಣರಾಗಿರಬೇಕು.

**21.** ಭಾರತದ ಪೌರತ್ವ ಪಡೆಯುವ ವಿಧಾನಗಳನ್ನು ಪಟ್ಟಿ ಮಾಡಿ.

- ❖ ಜನನದ ಮೂಲಕ
- ❖ ವಂಶಪಾರಂಪರ್ಯದ ಮೂಲಕ
- ❖ ನೋಂದಣಿಯ ಮೂಲಕ
- ❖ ಭೂಭಾಗ ಸೇರ್ಪಡೆಯ ಮೂಲಕ

22. ಅಕ್ಷಾಂಶಗಳು ರೇಖಾಂಶಗಳಿಗಿಂತ ಹೇಗೆ ಭಿನ್ನವಾಗಿವೆ?

- ❖ ಅಕ್ಷಾಂಶಗಳು ಭೂಮಿಯ ಮೇಲ್ಮೈನಲ್ಲಿ ಪೂರ್ವ–ಪಶ್ಚಿಮಾಭಿಮುಖವಾಗಿ ಎಳೆಯಲ್ಪಟ್ಟ ಊಹಾರೇಖೆಗಳಾದರೆ ರೇಖಾಂಶಗಳು ಭೂಮಿಯ ಮೇಲ್ಮೈನಲ್ಲಿ ಉತ್ತರ–ದಕ್ಷಿಣಾಭಿಮುಖವಾಗಿ ಎಳೆಯಲ್ಪಟ್ಟ ಊಹಾರೇಖೆಗಳಾಗಿವೆ.

23. ಪಶ್ಚಿಮ ಘಟ್ಟ ಮತ್ತು ಮೈದಾನ ಪ್ರದೇಶದಲ್ಲಿ ಬೆಳೆಯುವ ಬೆಳೆಗಳಲ್ಲಿ ವ್ಯತ್ಯಾಸವಿದೆ. ಏಕೆ?

ಈ ಕೆಳಗಿನ ಅಂಶಗಳ ಪ್ರಭಾವದಿಂದಾಗಿ ಪಶ್ಚಿಮ ಘಟ್ಟ ಮತ್ತು ಮೈದಾನ ಪ್ರದೇಶದಲ್ಲಿ ಬೆಳೆಯುವ ಬೆಳೆಗಳಲ್ಲಿ ವ್ಯತ್ಯಾಸವಿದೆ.

- ❖ ಭೂಸ್ವರೂಪಗಳು
- ❖ ವಾಯುಗುಣ
- ❖ ಮಣ್ಣಿನ ಲಕ್ಷಣಗಳು
- ❖ ನೀರಾವರಿ ಸೌಲಭ್ಯ
- ❖ ಜನರ ಮನೋಭಾವ ಇತ್ಯಾಧಿ

**ಅಥವಾ**

ಕರ್ನಾಟಕದ ಪಶ್ಚಿಮ ಘಟ್ಟಗಳು ಏಕೆ ಹೆಚ್ಚು ಮಳೆ ಪಡೆಯುತ್ತವೆ?

- ❖ ಅರಬ್ಬಿ ಸಮುದ್ರದಿಂದ ನೈರುತ್ಯ ಮಾನ್ಸೂನ್ ಮಾರುತಗಳು ಅಪಾರ ಪ್ರಮಾಣದ ಜಲಾಂಶವನ್ನು ಹೊತ್ತು ಬರುವವು.
- ❖ ಇವುಗಳು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುವವು.

24. ದ್ವಿತೀಯ ವಲಯದ ಉದ್ಯೋಗಗಳಿಗೆ ಯಾವುದಾದರೂ ನಾಲ್ಕು ಉದಾಹರಣೆ ಕೊಡಿ.

- ❖ ಭತ್ತದಿಂದ ಅಕ್ಕಿ ತಯಾರಿಸುವುದು
- ❖ ಹತ್ತಿಯಿಂದ ಬಟ್ಟೆ ತಯಾರಿಸುವುದು.
- ❖ ಕಬ್ಬಿನಿಂದ ಬೆಲ್ಲ, ಸಕ್ಕರೆ ತಯಾರಿಸುವುದು.
- ❖ ಮೃಧು ಮರ/ಹುಲ್ಲಿನಿಂದ ಕಾಗದ ತಯಾರಿಸುವುದು.
- ❖ ಕಬ್ಬಿಣ ಅದಿರಿನಿಂದ ಕಬ್ಬಿಣ ಕಂಬ ತಯಾರಿಸುವುದು.
- ❖ ಬಾಕ್ಸೈಟ್ ನಿಂದ ಅಲ್ಯೂಮಿನಿಯಂ ತಯಾರಿಸುವುದು.

## IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 9x3=27

25. ಊಳಿಗಮಾನ್ಯ ಪದ್ಧತಿಯು ರಾಜಕೀಯ ವ್ಯವಸ್ಥೆಯಲ್ಲಿ ಉಂಟುಮಾಡಿದ ಬದಲಾವಣೆಗಳೇನು? ವಿವರಿಸಿ.

- ❖ ಉನ್ನತ ಪ್ರಭು ವರ್ಗಗಳು ಹುಟ್ಟಿದವು.
- ❖ ಆಳುವ ವರ್ಗ ಮನಬಂದಂತೆ ಅಧಿಕಾರ ನಡೆಸುವುದಕ್ಕೆ ತೆರೆ ಬಿದ್ದಿತು.
- ❖ ಮನುಷ್ಯನು ತನ್ನ ಹಕ್ಕುಬಾಧ್ಯತೆಗಳ ಹಾಗೂ ಕರ್ತವ್ಯಗಳನ್ನು ಈ ವ್ಯವಸ್ಥೆಯಿಂದ ಮನಗಂಡನು.
- ❖ ನಿಯಮಾವಳಿಗಳ ರಚನೆಯಾದವು.
- ❖ ಪ್ರಭು ವರ್ಗಗಳು, ಹಿಡುವಳಿದಾರ ಮತ್ತು ನೋಬಲರ ನಡುವೆ ವಾದ, ವಿವಾದ ಆರಂಭವಾದವು.
- ❖ ಕೆಲವೊಮ್ಮೆ ಈ ಧಣಿಗಳು ಆಳುವ ದೊರೆಗಳಿಗೇ ಪೈಪೋಟಿ ನೀಡಿದರು.
- ❖ ನ್ಯಾಯ ಸಮಾನತೆ ಇರಲಿಲ್ಲ.
- ❖ ಚರ್ಚು ಮತ್ತೆ ರಾಜ್ಯಗಳ ನಡುವೆ ಜಗಳ ಶುರುವಾಯ್ತು.

26. ಯುರೋಪಿನ ದೇಶಗಳ ಭೌಗೋಳಿಕ ಅನ್ವೇಷಣೆಗಳಿಗೆ ಕಾರಣಗಳೇನು?

- ❖ ಭೂಭಾಗದಿಂದಾಗುತ್ತಿದ್ದ ವ್ಯಾಪಾರ ನಿಂತಿದ್ದು–ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ಆಗುತ್ತಿದ್ದ ವ್ಯಾಪಾರ ನಿಂತಿತು (ಸಾ.ಶ.1453).
- ❖ ಸಾಹಸಿ ನಾವಿಕರು ಸಿಕ್ಕಿದ್ದು
- ❖ ನಾವಿಕ ಶಾಲೆ ಪ್ರಾರಂಭಿಸಿದುದು
- ❖ ವೈಜ್ಞಾನಿಕ ಉಪಕರಣಗಳಾದ ದಿಕ್ಸೂಚಿ ಮತ್ತು ಆಸ್ಟ್ರೋಲೋಬ್ ಕಂಡುಹಿಡಿದುದು
- ❖ ಮಾರ್ಕೋಪೋಲೋನ ಪುಸ್ತಕ – 'ಟ್ರಾವಲ್ಸ್ ಆಫ್ ಮಾರ್ಕೊ ಪೋಲೊ' ಇದರಲ್ಲಿ ಪೂರ್ವ ದೇಶಗಳಾದ ಚೀನಾ ಮತ್ತು ಭಾರತದಲ್ಲಿನ ಸಂಪತ್ತಿನ ವಿವರಣೆ ಇದೆ.

- ❖ ಕ್ರೈಸ್ತ ಮತ ಪ್ರಚಾರದ ಉದ್ದೇಶ
- ❖ ಸಾಂಬಾರು ಪದಾರ್ಥಗಳು, ರೇಷ್ಮೆ, ಹತ್ತಿ, ಮಸ್ಲಿನ್ ಬಟ್ಟೆಗೆ ಯುರೋಪಿನಲ್ಲಿದ್ದ ಬೇಡಿಕೆ.

**ಅಥವಾ**

ಕೈಗಾರಿಕಾ ಕ್ರಾಂತಿಗೆ ಕಾರಣಗಳಾವುವು?

- ❖ ಪುನರುಜ್ಜೀವನ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಆದ ವೈಜ್ಞಾನಿಕ ಆವಿಷ್ಕಾರ.
- ❖ ಭೌಗೋಳಿಕ ಅನ್ವೇಷಣೆಯಿಂದ ಯುರೋಪಿನ ಪ್ರಬಲ ರಾಷ್ಟ್ರಗಳು ತಮ್ಮ ವಸಾಹತುಗಳಿಂದ ಪಡೆದ ಲಾಭವನ್ನು ಕೈಗಾರಿಕೆಗಳಲ್ಲಿ ಹೂಡಿದ್ದು.
- ❖ ಯುರೋಪಿನಲ್ಲಿ ಜನಸಂಖ್ಯೆ, ಗ್ರಾಹಕ ಅಭಿರುಚಿ ಜಾಸ್ತಿಯಾಗಿ, ಬೇಡಿಕೆ ಜಾಸ್ತಿಯಾಯ್ತು, ಇದಕ್ಕೆ ವೈಜ್ಞಾನಿಕ ಸಂಶೋಧನೆ ಅನಿವಾರ್ಯವಾಯ್ತು.
- ❖ ಇಂಗ್ಲೆಂಡಿನಲ್ಲಿದ್ದ ರಾಜಕೀಯ ಸ್ಥಿರತೆ.
- ❖ ಧರ್ಮಯುದ್ಧಗಳಿಂದ ಬೇಸತ್ತಿದ್ದ ವಿಜ್ಞಾನಿಗಳು, ತಂತ್ರಜ್ಞರು, ಕುಶಲಕರ್ಮಿಗಳು ಇಂಗ್ಲೆಂಡಿನಲ್ಲಿ ನೆಲೆಸಿ
- ❖ ಕೈಗಾರಿಕಾ ಕ್ರಾಂತಿಯಲ್ಲಿ ಭಾಗವಹಿಸಿದ್ದು.

**27.** ಭಾರತದಲ್ಲಿ ವ್ಯವಹರಿಸುವ ಆರು ಪ್ರಮುಖ ವಿದೇಶಿ ಕಂಪನಿಗಳನ್ನು ಹೆಸರಿಸಿ.

- ❖ ಸ್ಯಾಮ್ ಸಂಗ್ ಮೊಬೈಲ್ ಕಂಪನಿ
- ❖ ಟೊಯೋಟಾ ವಾಹನ ಕಂಪನಿ
- ❖ ಹುಂಡೈ ವಾಹನ ಕಂಪನಿ
- ❖ ಆ್ಯಪಲ್ ಕಂಪನಿ
- ❖ ಅಮೇಜಾನ್ ಆನ್ಲೈನ್ ಕಂಪನಿ
- ❖ ಮೈಕ್ರೋಸಾಫ್ಟ್
- ❖ ಪೆಪ್ಸಿ
- ❖ ಐಬಿಎಂ

**28.** ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡಿರುವ ಮೂಲಭೂತ ಹಕ್ಕುಗಳಾವುವು?

- ❖ ಸಮಾನತೆ ಹಕ್ಕು
- ❖ ಸ್ವಾತಂತ್ರ್ಯದ ಹಕ್ಕು
- ❖ ಶೋಷಣೆಯ ವಿರುದ್ಧದ ಹಕ್ಕು
- ❖ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು
- ❖ ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು
- ❖ ಸಂವಿಧಾನದ ಪರಿಹಾರದ ಹಕ್ಕು

**ಅಥವಾ**

ಲೋಕಸಭಾ ಸದಸ್ಯರ ಅರ್ಹತೆಗಳನ್ನು ವಿವರಿಸಿ.

- ❖ ಭಾರತದ ಪ್ರಜೆ ಆಗಿರಬೇಕು
- ❖ ಕನಿಷ್ಠ 25 ವರ್ಷ ವಯಸ್ಸಾಗಿರಬೇಕು.
- ❖ ಸರ್ಕಾರದ ಯಾವುದೇ ಹುದ್ದೆಯಲ್ಲಿರಬಾರದು.
- ❖ ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.
- ❖ ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿರಬಾರದು.

- ❖ ಸಂಸತ್ತು ಕಾಲಕಾಲಕ್ಕೆ ನಿಗಧಿಪಡಿಸುವ ಅರ್ಹತೆ ಪಡೆದಿರಬೇಕು.

**29.** ನಮ್ಮ ದೇಶದ ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆಯ ಯಾವುದಾದರೂ ಆರು ಘಟಕಗಳನ್ನು ತಿಳಿಸಿ.

- ❖ ಪ್ರಾದೇಶಿಕ ಸೇನೆ
- ❖ ಎನ್.ಸಿ.ಸಿ.
- ❖ ಕರಾವಳಿ ಪಹರೆ
- ❖ ಗಡಿ ಭದ್ರತಾ ದಳ
- ❖ ನಾಗರಿಕ ರಕ್ಷಣೆ
- ❖ ಗೃಹರಕ್ಷಕ ದಳ
- ❖ ರೆಡ್ ಕ್ರಾಸ್

**30.** ವಿಭಕ್ತ ಮತ್ತು ಅವಿಭಕ್ತ ಕುಟುಂಬಕ್ಕೂ ಇರುವ ವ್ಯತ್ಯಾಸಗಳೇನು?

| ವಿಭಕ್ತ ಕುಟುಂಬ | ಅವಿಭಕ್ತ ಕುಟುಂಬ |
|---|---|
| ❖ ಚಿಕ್ಕ ಗಾತ್ರ<br>❖ ತಂದೆ ತಾಯಿ ಮತ್ತು ಅವರ ಅವಿವಾಹಿತ ಮಕ್ಕಳು ಮಾತ್ರ ಸದಸ್ಯರಾಗಿರುತ್ತಾರೆ.<br>❖ ತಂದೆ ಅಥವಾ ತಾಯಿ ನಿರ್ಧಾರ ತೆಗೆದುಕೊಳ್ಳುತ್ತಾರೆ. | ❖ ದೊಡ್ಡ ಗಾತ್ರ<br>❖ ತಂದೆ ತಾಯಿ ಮಕ್ಕಳು ಮೊಮ್ಮಕ್ಕಳುಗಳಿಂದ ಕೂಡಿದ ರಕ್ತಸಂಭಂಧಿಗಳೆಲ್ಲರೂ ಸದಸ್ಯರಾಗಿರುತ್ತಾರೆ.<br>❖ ಎಲ್ಲರಿಗಿಂತ ಹಿರಿಯ ಸದಸ್ಯನು ನಿರ್ಧಾರ ತೆಗೆದುಕೊಳ್ಳುತ್ತಾನೆ. |

**31.** ಪರಿಸರದ ಹೆಜ್ಜೆ ಗುರುತನ್ನು ಕಡಿಮೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳುವಿರಿ?

- ❖ ಸಾವಯವ ಅಥವಾ ಸ್ಥಳೀಯವಾಗಿ ಬೆಳೆದ ಆಹಾರವನ್ನು ಖರೀದಿಸುವುದು.
- ❖ ಅಂಗಡಿಗಳಿಗೆ ನಿಮ್ಮದೇ ಕೈಚೀಲಗಳನ್ನು ತೆಗೆದುಕೊಂಡು ಹೋಗುವುದು.
- ❖ ಹೊರಗಿನಿಂದ ಆಹಾರ ತರಿಸಿಕೊಳ್ಳುವುದಕ್ಕಿಂತ ಮನೆಯಲ್ಲಿಯೇ ತಯಾರಿಸಿಸುವುದು ಉತ್ತಮ
- ❖ ಬಳಕೆ ಮುಗಿದ ಮೇಲೆ ಎಲ್ಲ ವಿದ್ಯುದ್ದೀಪಗಳನ್ನು ಆರಿಸುವುದು.
- ❖ ರಾತ್ರಿ ಹೊತ್ತಿನಲ್ಲಿ ಏರ್ ಕಂಡೀಷನರ್ ಮತ್ತು ಹೀಟರ್‌ಗಳನ್ನು ಆರಿಸುವುದು.
- ❖ ಮನೆಯಿಂದಾಚೆಗೆ ಬನ್ನಿ, ನೀವು ಉಲ್ಲಾಸಭರಿತರಾಗಿರುತ್ತೀರಲ್ಲದೇ, ಕಡಿಮೆ ಇಂಧನ ಬಳಸುತ್ತೀರಿ.
- ❖ ಮನೆ/ಕಾರನ್ನು ತಂಪಾಗಿಸುವಾಗ ಅಥವಾ ಬಿಸಿಯಾಗಿಸುವಾಗ, ಬಾಗಿಲು–ಕಿಟಕಿಗಳನ್ನು ಮುಚ್ಚುವುದು.
- ❖ ಶಾಲೆಗೆ ನಡೆದು ಬನ್ನಿ ಅಥವಾ ಸೈಕಲ್ ತರುವುದು.
- ❖ ಸಾರ್ವಜನಿಕ ಸಾರಿಗೆಯನ್ನು ಬಳಸುವುದು.
- ❖ ಹೊರಗೆ ಹೋಗುವಾಗ ಅಥವಾ ನಡೆಯುವ ದಾರಿ ದೂರ ಇದ್ದಾಗ ಕಾರ್ ಪೂಲ್ ಬಳಸುವುದು.
- ❖ ಆದಷ್ಟು ಕಡಿಮೆ ಪ್ಯಾಕೇಜ್ ಇರುವ ವಸ್ತುಗಳನ್ನು ಖರೀದಿಸುವುದು
- ❖ ಅವಶ್ಯಕತೆಯಿಲ್ಲದಿದ್ದಾಗ ಚೀಲವನ್ನು ಕೇಳದಿರುವುದು

**ಅಥವಾ**

- ❖ ಮಣ್ಣಿನ ಸಂರಕ್ಷಣೆಗೆ ಕೈಗೊಳ್ಳಬಹುದಾದ ಕ್ರಮಗಳೇನು?
- ❖ ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.
- ❖ ಅಡ್ಡ ಬದುಗಳನ್ನು ನಿರ್ಮಿಸುವುದು.
- ❖ ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ.
- ❖ ಅರಣ್ಯ ನಾಶವನ್ನು ತಡೆಗಟ್ಟುವುದು ಮತ್ತು ಅರಣ್ಯಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.
- ❖ ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.

❖ ನೀರಿನ ಯೋಜಿತ ಬಳಕೆ.

❖ ಚೆಕ್ ಡ್ಯಾಮ್‌ಗಳ ನಿರ್ಮಾಣ ಇತ್ಯಾದಿ

**32.** ರಾಬಿ ಮತ್ತು ಖಾರೀಫ್ ಕಾಲದಲ್ಲಿಯ ಬೆಳೆಯ ವ್ಯತ್ಯಾಸಗಳನ್ನು ವಿವರಿಸಿ.

| ರಾಬಿ ಬೆಳೆಗಳು | ಖಾರಿಫ್ ಬೆಳೆಗಳು |
|---|---|
| ❖ ನೈಋತ್ಯ ಮಾನ್ಸೂನ್ ಮಾರುತಗಳ ಅವಧಿಯ ಬೆಳೆಗಳು<br>❖ ಜೂನ್/ಜುಲೈ ತಿಂಗಳಲ್ಲಿ ಬಿತ್ತನೆ ಮಾಡುವರು<br>❖ ಸೆಪ್ಟೆಂಬರ್/ಅಕ್ಟೋಬರ್ ನಲ್ಲಿ ಕಟಾವು ಮಾಡುವರು.<br>❖ ಉದಾ. ಭತ್ತ, ರಾಗಿ, ಹತ್ತಿ, ಜೋಳ, ಮೆಕ್ಕೆಜೋಳ | ❖ ಚಳಿಗಾಲದ ಅವಧಿಯ ಬೆಳೆಗಳು<br>❖ ಅಕ್ಟೋಬರ್/ನವೆಂಬರ್ ತಿಂಗಳಲ್ಲಿ ಬಿತ್ತನೆ ಮಾಡುವರು.<br>❖ ಫೆಬ್ರುವರಿ/ಮಾರ್ಚ್ ತಿಂಗಳಲ್ಲಿ ಕಟಾವು ಮಾಡುವರು.<br>❖ ಉದಾ. ಗೋಧಿ |

**ಅಥವಾ**

ಖನಿಜಗಳು ದೇಶದ ಅಭಿವೃದ್ಧಿಗೆ ಹೇಗೆ ಪೂರಕವಾಗಿವೆ? ವಿವರಿಸಿ.

❖ ಖನಿಜಗಳಿಂದ ಕೈಗಾರಿಕೆಗಳು ಅಭಿವೃದ್ಧಿಯಾಗುವವು.

❖ ಉದ್ಯೋಗಾವಕಾಶಗಳು ಹೆಚ್ಚಳವಾಗುವವು

❖ ಜನರ ಜೀವನ ಮಟ್ಟದಲ್ಲಿ ಹೆಚ್ಚಳವಾಗುವುದು.

❖ ರಾಷ್ಟ್ರೀಯ ಆದಾಯ ಹೆಚ್ಚಾಗುತ್ತದೆ.

❖ ತಲಾ ಆದಾಯ ಹೆಚ್ಚಾಗುತ್ತದೆ.

❖ ಕೃಷಿ ಅಭಿವೃದ್ಧಿಯಾಗುತ್ತದೆ.

❖ ಸಾರಿಗೆ ಸಂಪರ್ಕ ಅಭಿವೃದ್ಧಿಯಾಗುತ್ತವೆ.

❖ ವಿದೇಶಿ ವಿನಿಮಯ ಗಳಿಕೆ ಹೆಚ್ಚಾಗುತ್ತದೆ.

**33.** ಚಿಲ್ಲರೆ ವ್ಯಾಪಾರಿಗಳಿಂದ ಆಗುವ ಅನುಕೂಲಗಳೇನು?

❖ ಚಿಲ್ಲರೆ ವ್ಯಾಪಾರಿಗಳು ವಸ್ತುಗಳ ವಿತರಣೆಯ ಕೊನೆಯ ಕೊಂಡಿಯಾಗಿದ್ದಾರೆ,

❖ ಬೇರೆ ಬೇರೆ ಉತ್ಪಾದಕರಿಂದ ಉತ್ಪಾದನೆಯಾಗುವ ವಸ್ತುಗಳನ್ನು ಸಗಟು ವ್ಯಾಪಾರಿಗಳಿಂದ ಕೊಂಡು ಗ್ರಾಹಕರಿಗೆ ಒದಗಿಸುತ್ತಾರೆ.

❖ ಅನೇಕ ಸಾರಿ ಉಂಟಾಗುವ ವ್ಯಾಪಾರ ನಷ್ಟಗಳನ್ನು ತಾವೇ ಭರಿಸುತ್ತಾರೆ,

❖ ವಸ್ತುಗಳನ್ನು ಅವುಗಳ ಪ್ರಮಾಣಕ್ಕನುಗುಣವಾಗಿ ವಿಂಗಡಿಸಿ ಗ್ರಾಹಕರ ಇಷ್ಟದಂತೆ ಅವರಿಗೆ ಒದಗಿಸುತ್ತಾರೆ,

❖ ಗ್ರಾಹಕರಿಗೆ ಸಾಲ ಸೌಲಭ್ಯಗಳನ್ನು ಕೊಡುತ್ತಾರೆ.

❖ ಮಾರುಕಟ್ಟೆಗೆ ಹೊಸದಾಗಿ ಬಂದ ವಸ್ತುಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡುತ್ತಾರೆ.

❖ ಯಾವುದೇ ಒಂದು ನಿರ್ದಿಷ್ಟ ವಸ್ತು ದೊರೆಯದಿದ್ದಲ್ಲಿ ಪರ್ಯಾಯ ವಸ್ತುಗಳ ಬಗ್ಗೆ ತಿಳಿಸುತ್ತಾರೆ.

## V. ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 4x4=16

**34.** ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಯಾವುದಾದರೂ ನಾಲ್ಕು ಉಪಕರಣಗಳನ್ನು, ಅವುಗಳಿಂದಾದ ಉಪಯೋಗಗಳನ್ನು ತಿಳಿಸಿ.

| ಕ್ರ.ಸಂ. | ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಉಪಕರಣಗಳು | ಉಪಯೋಗಗಳು |
|---|---|---|
| 1 | ದಿಕ್ಸೂಚಿ | ನಾವಿಕರು ತಲುಪಬೇಕಾದ ಪ್ರದೇಶದ ದೂರ ಮತ್ತು ಮಾರ್ಗಗಳನ್ನು ತಿಳಿಯಲು ಸಹಾಯಕ |
| 2 | ಅಸ್ಟ್ರೋಲೋಬ್ | ಸೂರ್ಯ, ಗ್ರಹಗಳು ಮತ್ತು ನಕ್ಷತ್ರಗಳಿಗೆ ಭೂಮಟ್ಟದಿಂದ ಇರುವ ದೂರ ಮತ್ತು ಕಾಲವನ್ನು ತಿಳಿಯಲು ಸಹಾಯಕ |
| 3 | ಗ್ಲೋಬ್ | ಭೂಮಿಯ ಒಂದು ಚಿಕ್ಕ ಮಾದರಿಯಾಗಿದ್ದು ನೀರು ಮತ್ತು |

| | | |
|---|---|---|
| | | ಭೂಭಾಗಗಳ ಮಾಹಿತಿ ನೀಡುವುದು |
| 4 | ಪ್ರಪಂಚ ನಕ್ಷೆ | ಭೂಮಿಯ ಸಂಪೂರ್ಣ ಮಾಹಿತಿಯನ್ನು ನೀಡುವುದು. |

**35.** ಕೈಮಗ್ಗದಲ್ಲಿ ಬಟ್ಟೆ ತಯಾರಿಕೆಯ ಅನುಕೂಲಗಳು ಮತ್ತು ಅನಾನುಕೂಲಗಳನ್ನು ವಿವರಿಸಿ.

| ಅನುಕೂಲಗಳು | ಅನಾನುಕೂಲಗಳು |
|---|---|
| ❖ ಗುಡಿ ಕೈಗಾರಿಕೆಗಳ ಅಭಿವೃದ್ಧಿ<br>❖ ನಿರುದ್ಯೋಗದ ನಿಯಂತ್ರಣ<br>❖ ಸ್ಥಳೀಯ ಸಂಪನ್ಮೂಲಗಳ ಬಳಕೆ<br>❖ ಗ್ರಾಮಗಳ ಅಭಿವೃದ್ಧಿ<br>❖ ಸ್ಥಳೀಯ ಮಾರುಕಟ್ಟೆಗಳ ಅಭಿವೃದ್ಧಿ | ❖ ನಿಧಾನಗತಿಯ ಉತ್ಪಾದನೆ<br>❖ ಆರ್ಥಿಕ ಹಿನ್ನಡೆ<br>❖ ಕಡಿಮೆ ಗುಣಮಟ್ಟ<br>❖ ತಂತ್ರಜ್ಞಾನದ ಕೊರತೆ<br>ವಿದ್ಯುತ್ತಿನ ಕೊರತೆ/ಬಳಕೆಯಿಲ್ಲ |

**ಅಥವಾ**

ಅಮೇರಿಕ ಕ್ರಾಂತಿಗೆ ಕಾರಣಗಳು ಮತ್ತು ಅದರ ಪರಿಣಾಮಗಳನ್ನು ವಿವರಿಸಿ.

ಅಮೆರಿಕಾ ಕ್ರಾಂತಿಗೆ ಕಾರಣಗಳು:

❖ ಬ್ರಿಟಿಷರ ಕಾಯ್ದೆಗಳು

❖ ಬರಹಗಾರರ ಪ್ರಭಾವ

❖ ಅಮೆರಿಕಾದ ಜನರ ಸ್ವಾತಂತ್ರ್ಯ ಪ್ರೇಮ

❖ ಸಪ್ತ ವಾರ್ಷಿಕ ಯುದ್ಧ

ಅಮೆರಿಕಾ ಕ್ರಾಂತಿಯ ಪರಿಣಾಮಗಳು:

❖ ಫ್ರಾನ್ಸ್ ಮಹಾಕ್ರಾಂತಿಗೆ ಪ್ರಚೋದನೆ ನೀಡಿತು.

❖ ವಸಾಹತುಗಾರರ ಪಕ್ಷ ವಹಿಸಿ ಹೋರಾಡಿದ ಅನೇಕ ಫ್ರೆಂಚರು ಫ್ರಾನ್ಸಿನ ಮಹಾಕ್ರಾಂತಿಯ ನಾಯಕರಾದರು.

❖ ಅಮೆರಿಕದಲ್ಲಿನ ಅನೇಕ ಸ್ಪೇನ್ ಮತ್ತು ಪೋರ್ಚುಗಲ್‌ನ ವಸಾಹತುಗಳು ಸ್ವತಂತ್ರವಾಗಲು ಉತ್ತೇಜನ ಪಡೆದವು.

❖ ಅಮೆರಿಕಾ ಸಂಯುಕ್ತ ಸಂಸ್ಥಾನ ಎಂಬ ಹೊಸ ರಾಷ್ಟ್ರದ ಉದಯವಾಯಿತು.

**36.** ಭಾರತ ಸಂವಿಧಾನದ ಲಕ್ಷಣಗಳನ್ನು ವಿವರಿಸಿ.

❖ ಲಿಖಿತ ಮತ್ತು ಬೃಹತ್ ಸಂವಿಧಾನ
❖ ಭಾಗಶಃ ನಮ್ಯ ಮತ್ತು ಭಾಗಶಃ ಅನಮ್ಯ ಸಂವಿಧಾನ
❖ ಸಂಸದೀಯ ಸರ್ಕಾರ ಪದ್ಧತಿ
❖ ಗಣತಂತ್ರ ವ್ಯವಸ್ಥೆ
❖ ಸಂಯುಕ್ತ ಪದ್ಧತಿ
❖ ಮೂಲಭೂತ ಹಕ್ಕುಗಳು
❖ ಮೂಲಭೂತ ಕರ್ತವ್ಯಗಳು
❖ ರಾಜ್ಯ ನಿರ್ದೇಶಕ ತತ್ವಗಳು
❖ ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ
❖ ಏಕಪೌರತ್ವ
❖ ವಯಸ್ಕ ಮತದಾನ ಪದ್ಧತಿ
❖ ದ್ವಿಸದನ ಶಾಸಕಾಂಗ ಪದ್ಧತಿ
❖ ಪಕ್ಷ ಪದ್ಧತಿ

**37.** ನದಿಗಳಿಗೆ ಏಕೆ ಡ್ಯಾಮ್ (ಅಣೆಕಟ್ಟು) ಕಟ್ಟುತ್ತಾರೆ?


ಈ ಕೆಳಗಿನ ಉದ್ದೇಶಗಳಿಗಾಗಿ ನದಿಗಳಿಗೆ ಡ್ಯಾಮ್ (ಅಣೆಕಟ್ಟು) ಕಟ್ಟುತ್ತಾರೆ

❖ ನೀರಾವರಿ ಸೌಲಭ್ಯವನ್ನು ಒದಗಿಸುವುದು

❖ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು
❖ ನದಿಗಳ ಪ್ರವಾಹವನ್ನು ನಿಯಂತ್ರಿಸುವುದು
❖ ನೌಕಾಯಾನದ ಸೌಲಭ್ಯವನ್ನು ಒದಗಿಸುವುದು
❖ ಗೃಹ ಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು.
❖ ಮಣ್ಣಿನ ಸವಕಳಿಯನ್ನು ನಿಯಂತ್ರಿಸುವುದು
❖ ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು
❖ ಅರಣ್ಯ ಸಂಪತ್ತನ್ನು ವೃದ್ಧಿಸುವುದು

**VI.** 38. ಕರ್ನಾಟಕದ ನಕ್ಷೆ ಬರೆದು, ಈ ಕೆಳಗಿನವುಗಳನ್ನು ಗುರುತಿಸಿ. **1+4=5**

**b)** ಕರಾವಳಿ ಮೈದಾನ **b)** ಕೃಷ್ಣ ನದಿ **c)** ಕಾವೇರಿ ನದಿ **d)** ತುಂಗಭದ್ರ ನದಿ




ಮಹಾದೇವಪ್ಪ ಕುಂದರಗಿ
ಸರ್ಕಾರಿ ಪ್ರೌಢ ಶಾಲೆ ಆವತಿ
ಚಿಕ್ಕಮಗಳೂರು ತಾ&ಜಿ
ಮೊ: 9481216233